# ನಿರಾಭಾರಿ

ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಪ್ರವಚನಗಳ ಚಿಂತನ: ಮಂಥನ




ಪ್ರಧಾನ ಸಂಪಾದಕರು

- ಡಾ. ಎಸ್. ಟಿ. ಮೇರವಾಡೆ

ಸಂಪಾದಕರು

- ಡಾ. ಆರ್. ವಿ. ಪಾಟೀಲ
- ಡಾ. ಎಂ. ಎಸ್. ಮಾಗಣಗೇರಿ

**Nirabhari**

Editer-in-Chief : Dr. S. T. Merwade

Editor : Dr. R. V. Patil, Dr. M. S. Maganageri.

Publisher : Soumya Prakashan BJP-F-27-2012-13 Mahabaleswar Colony, Vijayapur

© : Publishers

First Edition : December, 2023

Copies : 1000

Pages : x+173

Price : ₹ 150

Book Size : Demy 1/8

Paper Used : 70 GSM N.S Maplitho

ISBN : 978-93-83813-59-9

**ನಿರಾಭಾರಿ: ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಪ್ರವಚನಗಳ ಚಿಂತನ: ಮಂಥನ**

ಪ್ರಧಾನ ಸಂಪಾದಕರು : ಡಾ. ಎಸ್. ಟಿ. ಮೇರವಾಡೆ

ಸಂಪಾದಕರು : ಡಾ. ಆರ್. ವಿ. ಪಾಟೀಲ, ಡಾ. ಎಂ. ಎಸ್. ಮಾಗಣಗೇರಿ

ಪ್ರಕಾಶಕರು : ಸೌಮ್ಯ ಪ್ರಕಾಶನ ಬಿಜೆಪಿ–ಎಫ್–೨೭–೨೦೧೨–೧೩ ಮಹಾಬಳೇಶ್ವರ ಕಾಲೋನಿ, ವಿಜಯಪುರ

ಹಕ್ಕುಗಳು : ಪ್ರಕಾಶಕರವು

ಮೊದಲ ಮುದ್ರಣ : ಡಿಸೆಂಬರ್, ೨೦೨೩

ಪ್ರತಿಗಳು : ೧೦೦೦

ಪುಟಗಳು : x+೧೭೩

ಬೆಲೆ : ₹ ೧೫೦

ಪುಸ್ತಕದ ಆಕಾರ : ಡೆಮಿ ೧/೮

ಪೇಪರ ಬಳಕೆ : ೭೦ ಜಿ.ಎಸ್.ಎಂ., ಎನ್.ಎಸ್, ಮ್ಯಾಪಲಿಥೋ

ಮುಖಪುಟ : ಆರ್ಟೆಕ್, ಧಾರವಾಡ

ಪುಟ ವಿನ್ಯಾಸ : ಜಾವೇದ ತಡಕೋಡ, ಧಾರವಾಡ

ಮುದ್ರಣ : ಲಿಖೀತ್ ಪ್ರಿಂಟರ್ಸ್, ಧಾರವಾಡ

## ಪರಿವಿಡಿ

ಓದಿನೊಳಗಣ ಪ್ರವೇಶದ ನಿವೇದನೆ

೧. ಗುರು ಮಹಾತ್ಮರು ಶ್ರೀ ಸಿದ್ಧೇಶ್ವರ ಸ್ವಾಮಿಗಳು ೦೧
– ಡಾ. ಎ. ಸಿ. ವಾಲಿ

೨. ನಿಜದರಿವಿನಲಿ ನೆಲೆಯಾದವರು ಪೂಜ್ಯ ಸಿದ್ಧೇಶ್ವರ ಶ್ರೀಗಳು ೦೩
– ಪ್ರೊ. ಎಸ್. ಟಿ. ಮೇರವಾಡೆ

೩. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು : ವಿಭೂತಿ ಯೋಗ ೦೮
– ಡಾ. ಕಲ್ಲಯ್ಯ ಎಸ್. ಹಿರೇಮಠ

೪. ಬಯಲಾಲಯದ ನಾದ ಬಿಂದು
ಕಲಾತೀತ ಶ್ರೀ ಸಿದ್ಧೇಶ್ವರ ಸ್ವಾಮಿಗಳು ೧೮
– ಡಾ. ಆರ್. ವಿ. ಪಾಟೀಲ

೫. ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಶ್ರೀಗಳ
ಸಾಮಾಜಿಕ ಚಿಂತನೆಗಳು ೨೭
– ಡಾ. ಉಷಾದೇವಿ ಹಿರೇಮಠ

೬ ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳ
ಪ್ರವಚನಗಳಲ್ಲಿ– ಆಧ್ಯಾತ್ಮ
– ಡಾ. ಪುಷ್ಪಾ ಬಸನಗೌಡರ ೩೩

೭ ಮರೆಯಾದ ಶತಮಾನದ ಸಂತ :
ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿ
– ಡಾ. ಎಂ. ಎಸ್. ಮಾಗಣಗೇರಿ ೪೦

೮. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಪ್ರವಚನಗಳಲ್ಲಿ
ದೈನಂದಿನ ಲಯ
– ಡಾ. ಅನಿತಾ ಎಚ್. ಹಳ್ಳಿಯಾಳ ೪೯

೯. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳ
ಕಥನಗಳಲ್ಲಿ ಆಧ್ಯಾತ್ಮಿಕತೆ
– ಶಕುಂತಲಾ ಪ್ರ. ಬರಗಿ ೬೫

# ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಶ್ರೀಗಳ ಸಾಮಾಜಿಕ ಚಿಂತನೆಗಳು

• ಡಾ. ಉಷಾದೇವಿ ಹಿರೇಮಠ

"ಓಂ ಪೂರ್ಣಮದಃ । ಪೂರ್ಣಮಿದಂ, ಪೂರ್ಣಾತ್ಪೂರ್ಣಮುದಚ್ಯತೇ, ಪೂರ್ಣಸ್ಯ ಪೂರ್ಣಮಾದಾಯ। ಪೂರ್ಣಮೇವಾವಶಿಷ್ಯತೇ । ಓಂ ಶಾಂತಿಃ ಶಾಂತಿಃ ಶಾಂತಿಃ ॥ ಎಂದರೆ ಪರಬ್ರಹ್ಮವು ಪೂರ್ಣ. ಇದು ಎಂದರೆ ವ್ಯಕ್ತವಾದ ಜಗತ್ತು ಕೂಡ ಪೂರ್ಣ. ಪೂರ್ಣವಾದ ಪರಬ್ರಹ್ಮದಿಂದ ಬಂದ ಈ ಜಗತ್ತು ಎಲ್ಲ ಅವಸ್ಥೆಯಲ್ಲಿಯೂ ಎಲ್ಲ ರೀತಿಯಿಂದಲೂ ಪೂರ್ಣವಾದುದು. ಶಿವ ಸ್ವರೂಪವಾದುದು. ಜಗತ್ತು ಲಿಂಗಮಯವಾಗಿದೆ ಎಂಬುದು ಶರಣರ ಅಪ್ಪಣೆ. ಇಂಥ ಲಿಂಗಮಯ ಜಗತ್ತಿಗೆ ಕಾಲಕಾಲಕ್ಕೂ ಶಿವಯೋಗಿಗಳು ಬಂದು ಲೋಕ ಕಲ್ಯಾಣಗೈದು ಮತ್ತೆ ಪರಿಪೂರ್ಣದಲ್ಲಿ ಒಂದಾಗಿದ್ದಾರೆ. ಪರಿಪೂರ್ಣದ ಮಹಾಬೆಳಕು, ವಿಜಯಪುರದ ಧರೆಯ ಭುವನದ ಭಾಗ್ಯವಾಗಿ, ಜ್ಞಾನದ ಸುಧೆ ಹರಿಸಿದ ಮಹಾನ್ ದಾರ್ಶನಿಕರು ಶ್ರೀ ಸಿದ್ಧೇಶ್ವರ ಶ್ರೀಗಳು.

**ಉಸುರಿನ ಪರಿಮಳವಿರಲು**
**ಕುಸುಮದ ಹಂಗೇಕಯ್ಯಾ?**
**ಕ್ಷಮೆ, ದಯೆ, ಶಾಂತಿ, ಸ್ಮರಣೆಯಿರಲು**
**ಸಮಾಧಿಯ ಹಂಗೆಕಯ್ಯಾ**
**ಲೋಕವೆ ತಾನಾದ ಬಳಿಕ**
**ಏಕಾಂತದ ಹಂಗೇಕಯ್ಯಾ ಚೆನ್ನಮಲ್ಲಿಕಾರ್ಜುನ**

ಎಂಬ ಅಕ್ಕಮಹಾದೇವಿಯ ವಚನದ ಸಾರವು ಶ್ರೀಗಳ ವ್ಯಕ್ತಿತ್ವಕ್ಕೆ ಮುಕುಟ ಪ್ರಾಯವಾಗಿದೆ. ಕ್ಷಮೆ, ದಯೆ, ಶಾಂತಿಗಳ ಮಂತ್ರ ಹೇಳಿಕೊಟ್ಟು ಈ ಲೌಕಿಕದಿಂದ ಹೊರಟು ನಡೆದ ಜಂಗಮರು. ದೇಹ ಮತ್ತು ಕರ್ಮದ ಬಂಧನವನ್ನು ನೀಗಿ

ನಿರಾಭಾರಿ ಅನುಸಂಧಾನ ಹೊಂದಿದವರೆ ನಿಜ ಶರಣರು ಎಂಬುವುದು ಪರಮಾತ್ಮನಲ್ಲಿ ಮುಖ್ಯ ಸಂಗತಿ. ಅಸಾಧಾರಣ ವೈರಾಗ್ಯದ ತೇಜೋಮೂರ್ತಿಗಳಾಗಿ, ೨೧ ಶತಮಾನದ ಮಹಾನ್ ಸಂತರಾಗಿ ಜನಮಾನಸದಲ್ಲಿ ನೆಲೆ ನಿಂತಿದ್ದಾರೆ. ಬಹುಭಾಷಾ ಪಂಡಿತರಾಗಿ, ಉಪನಿಷತ್, ವೇದಗಳ ಸಾರವನ್ನು ಸರಳವಾಗಿ ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಅವರು ಪ್ರವಚನಗಳಲ್ಲಿ ಅಭಿವ್ಯಕ್ತಿಸುವ ರೀತಿ ಅನನ್ಯವಾದುದು. ನಮ್ಮ ಸುತ್ತಲಿನ ಸುಂದರ ಪ್ರಕೃತಿಯ ಚರಾಚರ ವಸ್ತುಗಳೇ ಅವರ ಪ್ರವಚನದ ಅಂಶಗಳು. 'ಪ್ರಕೃತಿ ಆರಾಧನೆಯೇ ಪರಮನಾರಾಧನೆ' ಎಂಬ ಕವಿವಾಣಿಯಂತೆ 'ಸತ್ಯಂ-ಶಿವಂ-ಸುಂದರಂ' ಪರಿಕಲ್ಪನೆಯನ್ನು ಪ್ರಕೃತಿಯಲ್ಲಿ ತೋರಿಸಿಕೊಟ್ಟಂತಹ ಪರಮ ಜ್ಞಾನಿಗಳು.

ಸಮಾಜದ ಬಹುದೊಡ್ಡ ಶಕ್ತಿಯಾಗಿ, ಜ್ಞಾನಸೂರ್ಯವಾಗಿ ತಮ್ಮ ಅನುಭಾವದ ಜ್ಞಾನದಿಂದ ಲೋಕವನ್ನು ಬೆಳಗಿದ ಅನುಭಾವಿಗಳು. ತಮ್ಮ ಪ್ರವಚನಗಳು ಉದ್ದಕ್ಕೂ ಸಂಘ ಜೀವಿಯಾದ ಮನುಷ್ಯನು ತನ್ನ ಸಹಚರರೊಂದಿಗೆ ಯಾವ ರೀತಿಯಾಗಿ ಬಾಳಬೇಕು ಎಂಬುದನ್ನು ಪ್ರೀತಿ, ವಿಶ್ವಾಸ, ಸ್ನೇಹ, ಹೊಂದಾಣಿಕೆಗಳೊಂದಿಗೆ ಬದುಕುವ ಕಲೆಯನ್ನು ತೋರಿಸಿಕೊಟ್ಟರು. ನಿರ್ಮೋಹಿಗಳಾಗಿ ಬದುಕುವ ತತ್ವವನ್ನು ಕಲಿಸಿಕೊಟ್ಟವರು. ತತ್ವಜ್ಞಾನ ವಿಷಯದಲ್ಲಿ ವಿಶೇಷ ಪರಿಣತಿ ಹೊಂದಿದ ಶ್ರೀಗಳು ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ವೈಜ್ಞಾನಿಕ, ಚಿಂತನೆಗಳು ಹೀಗೆ ಹತ್ತು ಹಲವಾರು ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಾ ಸಹೃದಯರನ್ನು ಮಂತ್ರ ಮುಗ್ದರನ್ನಾಗಿಸಿದ್ದಾರೆ. ಶ್ರೀಗಳ ಮೌಲ್ಯಾಧಾರಿತ ಚಿಂತನೆಗಳು ಮನುಕುಲಕ್ಕೆ ಕೈದೀವಿಗೆಯಾಗಿವೆ.

ಘನಕ್ಕೆ ಘನವಾದ ಶ್ರೀಗಳು ಯಾವಾಗಲೂ 'ಸರ್ವೇ ಜನಾಃ ಸುಖಿನೋ ಭವಂತು' ಎಂದು ಲೋಕ ಕಲ್ಯಾಣವನ್ನೇ ಬಯಸಿದವರು. ಜೀವನ ಎಂದರೆ ತಪಸ್ಸು ಎನ್ನುವುದು ಶ್ರೀಗಳ ವ್ಯಾಖ್ಯಾನ. ಇದಕ್ಕೆ ಒಂದು ಮರದ ಉದಾಹರಣೆ ಕೊಡುತ್ತಾ ಯಾವ ರೀತಿಯಾಗಿ ಮರ ನಿಷ್ಕಾಮದಿಂದ ಇತರರಿಗೆ ಪರೋಪಕಾರಿಯಾಗಿ ಸೇವೆಯನ್ನು ಸಲ್ಲಿಸುತ್ತದೆಯೋ ಅದೇ ರೀತಿ ನಾವು ಕೂಡಾ ಮರದಂತೆ ನಿಸ್ವಾರ್ಥಿಯಾಗಿ ಬಾಳಬೇಕು ಎನ್ನುತ್ತಾರೆ. ಭೂಮಿಗೆ

ಬಿದ್ದ ಸಣ್ಣ ಬೀಜವೊಂದು ಮೊಳಕೆವೊಡೆದು, ಸಸಿಯಾಗಿ, ಮರವಾಗಿ ಅದು ಫಲ ಕೊಡುವುದಕ್ಕೆ ಎಷ್ಟೋ ವರ್ಷಗಳು ಬೇಕಾಗುತ್ತದೆ. ಅದು ಕೊಡುವ ರುಚಿ ಭರಿತ ಹಣ್ಣುಗಳಾಗಿರಲಿ, ಸುಗಂಧ ಭರಿತ ಪುಷ್ಪಗಳಾಗಲಿ, ತಂಪನ್ನು ನೀಡುವ ನೆರಳು ಹೀಗೆ ಪಕೃತಿಯು ಎಳ್ಳಷ್ಟು ಫಲಾಪೇಕ್ಷೆಯಿಲ್ಲದೆ ಎಲ್ಲರಿಗೂ ಪರೋಪಕಾರಿಯಾಗಿದೆ. ಈ ತತ್ತ್ವವನ್ನು ಅರಿತುಕೊಂಡು ಎಲ್ಲರೂ ಪರಿಶ್ರಮದಿಂದಲೇ ಬೆಳೆದು ಇತರರಿಗೂ ಪಕೃತಿಯಂತೆ ಪರೋಪಕಾರಿಯಾಗುವ ಗುಣವನ್ನು ಬೆಳಸಿಕೊಂಡು ಮೌನವಾಗಿಯೇ ನಮ್ಮ ಕೆಲಸಗಳನ್ನು ಮಾಡುವುದರಲ್ಲಿ ಪರಮಾನಂದವಿರುತ್ತದೆ ಎಂಬುವುದನ್ನು ಶ್ರೀಗಳು ತಿಳಿಸಿಕೊಟ್ಟಿದ್ದಾರೆ. ಡಿ.ವಿ.ಜಿ.ಯವರ ಕಗ್ಗದಲ್ಲಿ ಹೇಳುವಂತೆ,

**ಇಳೆಯಿಂದ ಮೊಳಕೆವೊಗೆವೆಂದು ತಮಟೆಗಳಿಲ್ಲ**
**ಫಲಮಾಗುವದಂದು ತುತ್ತೂರಿ ದನಿಯಿಲ್ಲ । ಬೆಳಕೀವ**
**ಸೂರ್ಯ ಚಂದ್ರರದೊಂದು ಸದ್ದಿಲ್ಲ**
**ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ ॥**

ಈ ಕಗ್ಗದ ಆಶಯದಂತೆ ನಾವು ಮೌನವಾಗಿಯೇ ಕೆಲಸ ಮಾಡಿ, ಜಗತ್ತಿಗೆ ತಿಳಿಸುವುದೆ ಮನುಷ್ಯ ಸಾಧನೆ ಎನ್ನುವುದು ಶ್ರೀಗಳ ಚಿಂತನೆ. ಮಾತಿಗಿಂತ ಕೃತಿ ಮುಖ್ಯ ಎನ್ನುವಂತೆ ನಾವು ಇರುವ ಈ ಸಂದರ್ಭಕ್ಕೆ ತಲೆಗೊಂದು ಏಟು ಕೊಟ್ಟಷ್ಟು ಪರಿಣಾಮಕಾರಿಯಾಗಿದೆ. "ಬದುಕು ಎಂದರೆ ಕೆಲಸ" ಎನ್ನುವ ಶ್ರೀಗಳು ಬರೀ ಭೌತಿಕದ ಕ್ರಿಯೆ ಆಗಿರದೆ ಬರೀ ಶ್ರಮದಾಯಕ ಕೆಲಸವು ಅಲ್ಲದ ನಿರಂತರವಾಗಿ ಬಡಿಯುವ ಹೃದಯದ ಮಿಡಿತವು ಕೂಡ ಕೆಲಸವೇ ಎನ್ನುತ್ತಾರೆ. ಎದೆಬಡಿತ ನಿಂತರೆ ಮುಂದಿನ ಎಲ್ಲ ಕೆಲಸಗಳು ಸ್ಥಗಿತಗೊಂಡಂತೆ. ಕೆಲಸವೇ ನಿಂತರೆ ಬದುಕು ಮುಗಿಯುತ್ತದೆ ಎನ್ನುವ ಶ್ರೀಗಳ ವಿಚಾರ ಬದುಕಿಗೆ ಹೊಸ ವ್ಯಾಖ್ಯಾನವಾಗಿದೆ.

ನಿತ್ಯ ನಿರಂತರವಾದ ಜೀವ ಜಗತ್ತು ನಡೆಯುವುದೇ ಈ ಕೆಲಸದಿಂದಲೇ ಪಂಚೇಂದ್ರಿಯಗಳು ಮತ್ತು ಜ್ಞಾನೇಂದ್ರಿಯಗಳಲ್ಲಿ ಅವಿರತವಾಗಿ ಈ ಕ್ರಿಯೆ ನಡೆಯುತ್ತಿರುತ್ತದೆ. ಹಣತೆಯಲ್ಲಿ ಎಣ್ಣೆ ಇರುವವರೆಗೆ ದೀಪ ಬೆಳಗುವಂತೆ ಹೃದಯ ಬಡಿತ ಇರುವವರೆಗೆ ಜೀವ ಜ್ಯೋತಿ ಬೆಳಗುತ್ತದೆ. 'ಸಮಾಜ' ಎಂದರೆ 'ದೇಹ' ಎಂದು ಅರ್ಥೈಸಿಕೊಡುವ ಪರಿ ಇನ್ನು ವಿಶಿಷ್ಟವಾದುದು.

ಆರೋಗ್ಯಯುತ ದೇಹಕ್ಕಾಗಿ. ಸ್ವೀಕಾರ ಮತ್ತು ವಿಸರ್ಜನೆ ಕ್ರಿಯೆಗಳು ಯಥಾವತ್ತಾಗಿ ನಡೆದರೆ ಮಾತ್ರ ಸದೃಢ ಆರೋಗ್ಯಯುತ ದೇಹ ನಿರ್ಮಾಣವಾಗುತ್ತದೆ. ಇದೇ ಮಾತನ್ನು ಸಮಾಜಕ್ಕೂ ಅನ್ವಯಿಸಿ ಹೇಳುವ ರೀತಿ ವಿಶಿಷ್ಟ ಸಮುದಾಯದ ಘಟಕಗಳಾದ ವ್ಯಕ್ತಿ ಸಮಾಜದಲ್ಲಿ ಪರಸ್ಪರ ತೆಗೆದುಕೊಳ್ಳುವ ಮತ್ತು ಕೊಟ್ಟು ಹೋಗುವ ಪ್ರಕ್ರಿಯೆಯಲ್ಲಿ ತೊಡಗಬೇಕು. ಪ್ರತಿಯೊಬ್ಬನು ಪರಿಶ್ರಮದಿಂದ ದುಡಿದು ಪ್ರತಿಫಲ ಪಡೆಯಬೇಕು. ಹಾಗೇ ಪಡೆದಿದ್ದನ್ನು ಮತ್ತೇ ಸಮಾಜಕ್ಕೆ ನೀಡಬೇಕು. ಶರಣರು ಹೇಳಿದಂತೆ ಕಾಯಕ ಮತ್ತು ದಾಸೋಹ ತತ್ವವನ್ನು ಅಳವಡಿಸಿಕೊಂಡು ಸಮಾಜದ ಪ್ರಗತಿಗೆ ಕಾರಣವಾಗಬೇಕು ಎಂಬುದು ಶ್ರೀಗಳ ಚಿಂತನೆಯಿಂದ ಸ್ಪಷ್ಟವಾಗುತ್ತದೆ. "ಸೋಹಂ ಎಂದೆನಿಸಿದ ದಾಸೋಹಂ ಎಂದೆನಿಸಯ್ಯಾ" ಎಂಬ ಶರಣ ತತ್ತ್ವ ಪ್ರತಿಯೊಬ್ಬರಲ್ಲಿ ಬಂದಾಗ ಸಮಾಜದಲ್ಲಿ ಆರೋಗ್ಯಯುತ ವಾತಾವರಣ ತುಂಬುತ್ತದೆ. ಸ್ವಾರ್ಥ ಚಿಂತನೆಯಿಂದ ದೇಹದ ಆರೋಗ್ಯ ಕೆಡುವಂತೆ ಸಮಾಜದ ಸ್ವಾಸ್ಥ್ಯ ಕೆಡಬಾರದು. ಈ ನಿಟ್ಟಿನಲ್ಲಿ ಜಗತ್ತಿನ ಅಮಿತ ಸಂಪದವನ್ನು ಪಡೆದು ಅದರ ಸುಖದ ಅಪರಿಮಿತ ಆನಂದವನ್ನು ಅನುಭವಿಸಿ ಪುನಃ ಕೊಟ್ಟು ಹೋಗಬೇಕು. ಅಂದರೆ ಮಾತ್ರ ಸಮಾಜ ಆರೋಗ್ಯದಿಂದ ಕೂಡಿರುತ್ತದೆ ಎನ್ನುತ್ತಾರೆ.

ಇನ್ನು ವರ್ಗ ಪರಿಕಲ್ಪನೆಯ ವಿಚಾರಕ್ಕೆ ಬಂದರೆ ಮೇಲ್ವರ್ಗ-ಕೆಳವರ್ಗ, ಬಡವ-ಬಲ್ಲಿದ ಈ ರೀತಿಯಾದ ವ್ಯವಸ್ಥೆ ನಿರ್ಮಾಣವಾಗಿರುವುದು ನಮ್ಮಿಂದಲೇ ಎನ್ನುತ್ತಾ, ಪ್ರಕೃತಿ ಎಲ್ಲರಿಗೂ ಸಮಾನ ಕೊಡುಗೆ ಕೊಟ್ಟಿದೆ. ಇದರಲ್ಲಿ ಭೇದ ಎಣಿಸುವುದು ಮನುಷ್ಯನ ಸಣ್ಣತನವೇ ಸರಿ. ಸೂರ್ಯನ ಕಿರಣಗಳು ಗುಡಿಸಲನ್ನು ಪ್ರವೇಶಿಸುವಂತೆ, ಎಲ್ಲರ ಮನೆ ಬೆಳಗುವ ದೀಪಗಳು ಸಮಾನ ಬೆಳಕು ಕೊಡುತ್ತವೆ. ಇದನ್ನು ಅರ್ಥೈಸಿಕೊಳ್ಳದ ಜನರು ದುಃಖಿಗಳಾಗಿದ್ದಾರೆ ಎನ್ನುತ್ತಾರೆ. ಶ್ರೀಗಳು ಸಾಮಾಜಿಕ ಚಿಂತನೆಗಳಲ್ಲಿ ಆಧ್ಯಾತ್ಮ ಮತ್ತು ತತ್ತ್ವಜ್ಞಾನದ ಲೇಪನವಿರುತ್ತದೆ. ಧರ್ಮವನ್ನು ದೀಪಕ್ಕೆ ಹೋಲಿಸಿ ಹೇಳುವ ಅವರ ವಿಚಾರಗಳು ಧರ್ಮವು ಎಲ್ಲರಿಗೂ ಸಮಾನ ಜ್ಯೋತಿ ಸ್ವರೂಪವಾಗಿರುವ ಧರ್ಮ ಅಂತರಂಗ ಮತ್ತು ಬಹಿರಂಗಗಳಲ್ಲೂ ಪ್ರಜ್ವಲಿಸುತ್ತಾ, ಬದುಕನ್ನು, ಸಮಾಜವನ್ನು ಸಮೃದ್ಧಿಗೊಳಿಸುತ್ತದೆ. ಈ ನಿಟ್ಟಿನಲ್ಲಿ ನಮ್ಮ ಬದುಕಿನ ಗತಿ ಸಾಗಬೇಕು ಎನ್ನುವ ಶ್ರೀಗಳ ಚಿಂತನೆಯು ಸಮಾಜವನ್ನು ಆರೋಗ್ಯವಾಗಿ ನಡೆಸುವಲ್ಲಿ ದಾರಿ ದೀಪವಾಗಿದೆ.

ಸಂಪಾದನೆಯ ಸದ್ಬಳಕೆಯ ಕುರಿತು ಹೇಳುವ ಅವರ ವಿಚಾರಗಳಲ್ಲಿ ಬದುಕು 'ಖೋ-ಖೋ' ಆಟದಂತೆ ಎನ್ನುತ್ತಾರೆ. ಇಲ್ಲಿ ಮುಟ್ಟುವವರು ಮತ್ತು ಮುಟ್ಟಿಸಿಕೊಳ್ಳುವವರು ಎರಡು ಗುಂಪುಗಳಿರುತ್ತವೆ. ಮುಟ್ಟಲು ಓಡುವವನು ತಾನು ಸ್ವಲ್ಪ ಹೊತ್ತು ಓಡಿ, ದಣಿವಾದಾಗ ಇನ್ನೊಬ್ಬರಿಗೆ 'ಖೋ' ಎಂದು ಹೇಳಿ ಮುಟ್ಟಲು ಹೇಳುವ ರೀತಿ ಆಟದ ಕ್ರಮವಾಗಿದೆ. ಹೀಗೆ ಆಡಿದರೆ ಎಲ್ಲರಿಗೂ ಆಟದ ಆನಂದ ಸಿಗುತ್ತದೆ. ಅದರ ಬದಲಾಗಿ ಮುಟ್ಟಲು ಓಡುವವನು ತಾನೊಬ್ಬನೆ ಓಡಿ ಇತರರಿಗೆ ಅವಕಾಶ ಕೊಡದೆ ಗೆಲುವು ತನಗೊಬ್ಬನಿಗೆ ಸಿಗಲಿ ಎಂದು ವಿಶ್ರಾಂತಿ ಇಲ್ಲದೆ ಓಡುತ್ತಾ ಹೋಗುವುದು. ಕೊನೆಗೊಮ್ಮೆ ಅವನು ಮುಗ್ಗರಿಸಿ ಬೀಳುತ್ತಾನೆ. ಆದ್ದರಿಂದ ಬದುಕಿನ ಆಟದಲ್ಲಿ ಪ್ರತಿಯೊಬ್ಬನು ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಂಡು ಮತ್ತೆ ಮುಂದಿನ ಸರದಿ ಅವರಿಗೆ ಕೊಟ್ಟರೆ ಎಲ್ಲರೂ ಸಂತೋಷವನ್ನು ಅನುಭವಿಸಲಿಕ್ಕೆ ಸಾಧ್ಯ. ಹೀಗಿದ್ದರೆ ಮಾತ್ರ ಬದುಕು ಆನಂದದಿಂದ ಕೂಡಿರುತ್ತದೆ ಎಂಬುದನ್ನು 'ಖೋ-ಖೋ' ಆಟದ ನಿದರ್ಶನದ ಮೂಲಕ ಶ್ರೀಗಳು ಕೊಡುವ ಚಿಂತನೆ ಸಮಾಜಕ್ಕೆ ಮಹತ್ವವಾಗಿವೆ. ಮನುಷ್ಯನು ಒಂದು ಕ್ಷಣ ಸ್ವಾರ್ಥ ಬಿಟ್ಟು ತನ್ನಂತೆ ಇತರರು ಎಂದು ಬಗೆದರೆ ಅದಕ್ಕಿಂತ ಸ್ವರ್ಗವಿಲ್ಲ ಎನ್ನುವುದು ಶ್ರೀಗಳ ಚಿಂತನೆಯಾಗಿದೆ.

ಸಮಾಜ ಎಂದರೆ "ದೇಹ ಮತ್ತು ಜೀವಾತ್ಮರುಗಳ ಮಹಾ ಸಮ್ಮೇಳನ" ಎನ್ನುತ್ತಾರೆ. ಸಮಾಜ ಎನ್ನುವುದು ಇಡಿಯಾಗಿ ಒಂದು ಇದರಲ್ಲಿ ಕೊಡುವ ಮತ್ತು ಪಡೆಯುವ ಎಂಬ ಎರಡು ವರ್ಗಗಳಿವೆ. ವ್ಯಕ್ತಿ ಬಾಹ್ಯವಾಗಿ ದುಡಿದು, ಮನದಿಂದ ಅರಿಯಬಲ್ಲನು, ಬೆರೆಯಬಲ್ಲನು. ಹೀಗಾಗಿ ಅಂತರಂಗ-ಬಹಿರಂಗಗಳೇ ಒಳ ಮತ್ತು ಹೊರ ವರ್ಗಗಳಾಗಿರುವಾಗ ಮೇಲ್ವರ್ಗ ಎಂಬುದು ಇಲ್ಲ, ಕೆಳವರ್ಗವು ಇಲ್ಲಾ ಎಂಬ ಸೂಕ್ಷ್ಮ ಚಿಂತನೆಯನ್ನು ಅರ್ಥೈಸಿಕೊಡುವ ಪರಿ ವಿಶಿಷ್ಟವಾದುದಾಗಿದೆ.

**"ಎರಡು ಕೋಣೆಗಳ ನೀಂ ಮಾಡು ಮನದಾಲಯದಿ । ಹೊರ ಕೋಣೆಯಲಿ ಲೋಗರಾಟಗಳನಾಡು । ವಿರಮಿಸೊಬ್ಬನೆ ಮೌನದೊಳಮನೆಯ ಶಾಂತಿಯಲಿ । ವರಯೋಗ ಸೂತ್ರವಿದು ಮಂಕುತಿಮ್ಮ ॥** [ಕಗ್ಗ ೭೦೧]

ಎಂಬ ಡಿ.ವಿ.ಜಿ. ಅವರ ಕಗ್ಗದ ಪದ್ಯದ ಆಶಯವು ಶ್ರೀಗಳ ಚಿಂತನೆಗಳ ಆಶಯವು ಒಂದೇ ಆಗಿದೆ. ಲೌಕಿಕದಲ್ಲಿ ಇದ್ದು, ಅಲೌಕಿಕರಾಗಿ ಬಾಳುವ ರೀತಿಗೆ ಇವರು ಕೊಡುವ ಅರಿವಿನ ನೆಲೆ ಬಹಳ ಮಹತ್ವದ್ದಾಗಿದೆ.

ಕವಿ ಮನಸ್ಸಿನ ಶ್ರೀಗಳು ಹಲವಾರು ಭಾಷೆಗಳಲ್ಲಿ ತಮ್ಮ ಪ್ರವಚನದ ಮೂಲಕ ಸಮಾಜಕ್ಕೆ ಕೊಟ್ಟಿರುವ ಚಿಂತನೆಗಳು ಸರ್ವ ಕಾಲಕ್ಕೂ ಮೌಲಿಕವಾಗಿವೆ. ಜನರ ಮನದ ಅಂಧಕಾರವನ್ನು ಮೌಢ್ಯತೆಯನ್ನು ತೊಲಗಿಸಲು ಜ್ಞಾನಸೂರ್ಯರಾಗಿ ಲೋಕ ಬೆಳಗಿದೆ. ಕಿಂಚಿತ್ತು ಅಹಂಕಾರ ಇಲ್ಲದ ನಿರಹಂಕಾರಿಗಳಾಗಿ 'ಎನಗಿಂತ ಕಿರಿಯರಿಲ್ಲ' ಎನ್ನುವ ಕಿಂಕರತ್ವದ ಸದುವಿನಯದ ಸರಳವಂತರು, ನಡೆದಾಡುವ ದೇವರಾಗಿ, ಭಗವದ್‌ರ್ಶನ ಕೊಟ್ಟ ಮಹಾನ ಸಂತರು. ಜಗತ್ತಿನ ಸಂತರ ಬಗ್ಗೆ ಕೇಳಿದ್ದೇವೆ ಆದರೆ ನಾವು ಯಾರು ಅವರನ್ನು ನೋಡಿಲ್ಲ. ಆದರೆ ಶ್ರೀಗಳ ವ್ಯಕ್ತಿತ್ವದಲ್ಲಿ ಎಲ್ಲಾ ಸಂತರ, ದಾರ್ಶನಿಕರ ಸಂಗಮವೇ ಇದೆ ಎಂಬುದು ಮನೋವೇದ್ಯವಾಗುತ್ತದೆ. ಈ ಯುಗದ ಮಹಾನ ಶಕ್ತಿಯಾಗಿ ಭಾರತೀಯ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸಿದ ಮಹಾಂತರು ಇಂಥವರನ್ನು ನೋಡಿದ ಅವರೊಂದಿಗೆ ಮಾತನಾಡಿದ ನಾವೇ ಭಾಗ್ಯವಂತರು. ನಾವು ಇದ್ದ ಕಾಲಕ್ಕೆ ಇಂತವರು ಇದ್ದರೆಲ್ಲ ಎಂಬುದೇ ನಮ್ಮ ಪುಣ್ಯ ಎಂದು ಭಾವಿಸುತ್ತ ಅವರ ಎಲ್ಲ ಸಾಮಾಜಿಕ ಭಗವತ್ ಚಿಂತನೆಗಳನ್ನು ಅರಿತು ನಡೆಯುವಲ್ಲಿ ನಾವೆಲ್ಲಾ ಸಾಗೋಣ.


## ಆಕರ ಗ್ರಂಥಗಳು

ಪೂಜ್ಯ ಶ್ರೀ. ಸಿದ್ಧೇಶ್ವರ ಮಹಾಸ್ವಾಮಿಗಳ ಪ್ರವಚನಗಳು

೧. ಗುಣಸಂಪದ – ಜ್ಞಾನಯೋಗ ಫೌಂಡೇಶನ್ ವಿಜಯಪುರ

೨. ನಾನಾರು – ಜ್ಞಾನಯೋಗ ಫೌಂಡೇಶನ್ ವಿಜಯಪುರ

೩. ದೇವಮಂಡಲ – ಜ್ಞಾನಯೋಗ ಫೌಂಡೇಶನ್ ವಿಜಯಪುರ

೪. ಆನಂದದ ಅನ್ವೇಷಣೆ – ಜ್ಞಾನಯೋಗ ಫೌಂಡೇಶನ್ ವಿಜಯಪುರ


ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಬಿ.ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ.